ಕೊಡಬಹುದು. ಅದಕ್ಕಾಗಿಯೇ ನಾನು ಆ ಹುಡುಗಿಯನ್ನು ಪದೇ ಪದೇ ನೀನು ಈ ದಾರಿಯಲ್ಲಿ ಬರುತ್ತಿರುತ್ತೀಯಾ ಎಂದು ಕೇಳಿದ್ದು.

ಹೌದೆಂದಳು. 'ನಾನು ನಾಗರಿಕ ಸೇವೆಯ ಸ್ಟೋರ್‌ನಲ್ಲಿ ಟೈಪಿಸ್ಟ್ ಆಗಿ ಕೆಲಸಕ್ಕಿದ್ದೇನೆ. ಪ್ರತಿ ಮಧ್ಯಾಹ್ನ ನಾನು ಇದೇ ದಾರಿಯಲ್ಲಿ ಮನೆಗೆ ಬರುತ್ತೇನೆ. ಇಂದು ಶನಿವಾರವಾದ್ದರಿಂದ ಬೇಗ ಬಂದೆ.'

ದಡದ ಗುಂಟ ಜೊತೆಯಲ್ಲಿ ನಡೆಯೋಣ. ಅದು ಮುಖ್ಯ, ಬೀದಿಗಿಂತಲೂ ಸ್ವಲ್ಪ ಕಡಿಮೆ ಜನಜಂಗುಳಿ ಪ್ರದೇಶ ಎಂದು ಹೇಳುತ್ತಾ ನನ್ನ ತೋಳ ಸೆರೆಯಲ್ಲಿ ಬೀದಿಯನ್ನು ದಾಟುವಾಗ ಎಚ್ಚರಿಕೆಯಿಂದ ಮಾರ್ಗದರ್ಶನ ಮಾಡಿದೆ.

'ಈ ಬೀದಿ ಥೇಮ್ಸ್ ನದಿಯ ಉತ್ತರ ದಂಡೆಯ ಜೊತೆ ಜೊತೆ ಹರಿದು ಹೋಗುತ್ತದೆ. ನೀನು ಸಾಮಾನ್ಯವಾಗಿ ಇದೇ ದಾರಿಯಲ್ಲಿ ಹೋಗುತ್ತೀಯಾ' ಎಂದು ಕೇಳಿದೆ.

'ಇಲ್ಲ, ಈ ದಾರಿಯಲ್ಲಿ ಅಷ್ಟು ಜನಜಂಗುಳಿ ಇರುವುದಿಲ್ಲ, ಆದರೆ, ಜನರು ತುಂಬಾ ಕೊಳಕರು ಎಂಬುದು ಅಷ್ಟೆ ನಿಜ. ನಾನು ಮುಖ್ಯ ಬೀದಿಗುಂಟ ಮನೆಗೆ ಹೋಗುತ್ತೇನೆ.'

ಈ ಬಡ ಸುಸಂಸ್ಕೃತ ಹುಡುಗಿಯು ನನ್ನನ್ನು ಸೋಲಿಸಿದಳು. ನಾನದನ್ನು ಸ್ವೀಕರಿಸಿದೆ. ಆಂಗ್ಲ ಜ್ಞಾನದ ಸೌಂದರ್ಯದ ಆಕರ್ಷಣೆ ನನ್ನನ್ನು ಸೋಲಿಸಿದ್ದು ಇದು ಮೊದಲೇನಲ್ಲ. ನಾವು ವೆಸ್ಟ್ ಮಿನಿಸ್ಟರ್ ಬ್ರಿಜ್ ಸಮೀಪಿಸಿದೆವು.

'ನಾನು ನಿನ್ನನ್ನು ಮಿಸ್ ಕ್ಲಿಫರ್ಡ್ ಅಥವಾ ಅಲೀಸ್ ಎಂದು ಕರೆಯಲೇ?'

'ನಾನಿನ್ನು ದೊಡ್ಡವಳಾಗಿಲ್ಲ. ನೀವು ನನ್ನನ್ನು ಹೇಗಾದರೂ ಕರೆಯಬಹುದು. ನನ್ನನ್ನು ಮ್ಯಾಗಿ ಎಂದು ಕರೆಯುತ್ತಾರೆ' ಎಂದು ನಕ್ಕಳು.

'ನೀನು ದೊಡ್ಡವಳಾಗುವುದಕ್ಕೆ ಕಾತರದಿಂದ ಇದ್ದೀಯಾ.'

'ಹೌದು.'

'ಆದರೆ, ಏಕೆ.'

'ನಾನು ದೊಡ್ಡವಳಾದರೆ ನನಗೆ ಹೆಚ್ಚಿಗೆ ಸಂಬಳ ಬರುತ್ತದೆ. ನನ್ನ ತಾಯಿಗೆ ತುಂಬಾ ವಯಸ್ಸಾಗಿದೆ.'

'ನೀನು ಮಾಡುತ್ತಿರುವ ಕೆಲಸ ನಿನಗೆ ಇಷ್ಟವಾಗಿದೆಯಾ.'

'ಇಲ್ಲ, ಕೆಲಸ ತುಂಬಾ ಯಾಂತ್ರಿಕವಾಗಿದೆ. ನಾನು ಬಯಸುವುದು ತಲೆ ಮತ್ತು ಮನಸ್ಸಿಗೆ ಉಪಯೋಗ ಆಗುವ ಕೆಲಸ. ಅದು ಕಾರ್ಯದರ್ಶಿಯಂತಹ ಕೆಲಸ' ಎಂದಳು. ಪಾರ್ಲಿಮೆಂಟ್ ಭವನದ ಮುಂಭಾಗದಲ್ಲಿ ಗಾರ್ಡ್ಸ್‌ಗಳು ಪಥಸಂಚಲನ ಮಾಡುತ್ತಿದ್ದರು.

ಅಲ್ಲಿಂದ ಮುಂದೆ ಬಲಭಾಗಕ್ಕೆ ಸೇತುವೆ ದಾಟಿ ಲ್ಯಾಂಬ್ರೆತ್ ತಲುಪಿದೆವು. 'ನಾನು ಎಂದಾದರೂ ಆಪ್ತ ಕಾರ್ಯದರ್ಶಿಯಾದರೆ ನನ್ನ ತಾಯಿಯನ್ನು ಇಲ್ಲಿಂದ ಬೇರೆಡೆಗೆ ಕರೆದೊಯ್ಯುವೆ' ಎಂದು ಅವಳು ಹೇಳಿದಳು.

'ನಿನ್ನ ಮೊದಲನೆ ಹೆಸರು ಬಿಟ್ಟು ಎರಡನೆ ಹೆಸರಿನಿಂದ ಏಕೆ ಕರೆಯಿಸಿಕೊಳ್ಳುತ್ತಿ' ಎಂದು ಕೇಳಿದೆ. ನಾವು ಕೊಳಚೆ ಜನರ ಮಧ್ಯದಿಂದ ದಾರಿ ಮಾಡಿಕೊಂಡು ಮುನ್ನಡೆದೆವು.

'ನನ್ನ ತಾಯಿಯ ಮೊದಲ ಹೆಸರು ಕೂಡ ಅಲೀಸ್. ನನ್ನ ಅಪ್ಪ ಎರಡನೆ ಹೆಸರಿನಿಂದ ಕರೆಯುತ್ತಿದ್ದರಿಂದ ಅದೇ ನನ್ನ ಪ್ರೀತಿಯ ಹೆಸರಾಯಿತು.'

'ನಿಮ್ಮ ತಂದೆಯವರು ನಿನ್ನನ್ನು ಮ್ಯಾಗಿ ಎಂದು ಕರೆಯುತ್ತಿದ್ದರೋ ಅಥವಾ ಮ್ಯಾಗ್ಗಿ ಎಂದು